ಒ.ಎಸ್. ನಂ.20/2016
ಡಿಡಬ್ಲು-1

ದಿನಾಂಕ 03.01.2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲುಃ ವಾದಿ ಪರ ಶ್ರೀ ಜಿವಿಟಿ ವಕೀಲರಿಂದ

ನಿಪಿ-1 ರಂತೆ ತಲಾಟಿ ಯವರು ನೋಟಿಸು ನೀಡಿರುತ್ತಾರೆಂದರೆ ಸರಿ. ನಿಪಿ-2 ರಲ್ಲಿ ನನ್ನ ಹಾಗೂ ನನ್ನ ತಂದೆಯ ಸಹಿ ಪಡೆದಿದ್ದು, ವಾದಿಯರ ಅಕ್ಕ ಶಾಂತಾಬಾಯಿಯವರ ಸಹಿ ಪಡೆದಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಖಂಡಿಕೆ 8, 9 ರಲ್ಲಿ ಬರೆದ ವಿಚಾರವು ನಿಪಿ-4 ರಲ್ಲಿ ಬರೆದಿಲ್ಲ. ನಿಪಿ-4 ರಲ್ಲಿ ಬರೆದ ವಿಚಾರ ಸರಿಯಲ್ಲ. ನಿಪಿ-5 ರಲ್ಲಿ ನಿಪಿ-5 ಅಂಶವು ಸರಿಯಿರುತ್ತದೆ. ನಿಪಿ-8 ರಲ್ಲಿ ನನ್ನ ಅಕ್ಕ ಶಾಂತಾಬಾಯಿ ತೋರಿಸಿಲ್ಲ ಎಂದರೆ ಸರಿ. ನಿಪಿ-9 ರಲ್ಲಿ ನನ್ನ ಹೆಸರು ತೋರಿಸಿಲ್ಲ ಎಂದರೆ ಸರಿ.

ವಾದಿಯು ಒಂದೇ ದಿನ ತನ್ನ ಹೆಸರಿನಲ್ಲಿ, ತನ್ನ ಹೆಂಡತಿ ಹಾಗೂ ತಾಯಿಯ ಹೆಸರಿನಲ್ಲಿ ತಲಾ ಒಂದೊಂದು ಆಸ್ತಿ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ನಿಪಿ-1 ರ ದಾಖಲೆಯ ದಿನಾಂಕದ ನಂತರ ನನ್ನ ತಾಯಿ ಮರಣ ಹೊಂದಿರುತ್ತಾಳೆ. ನನ್ನ ತಾಯಿಗೆ ಆರೋಗ್ಯ ಸರಿಯಿಲ್ಲದ ಕಾರಣ ಅಣ್ಣನ ಆಸ್ತಿಯನ್ನು ಮುಳುಗಿಸಲು ನಕಲಿ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳ
ಅಫಜಲಪೂರ